## ಕರ್ನಾಟಕ ವಿಧಾನಪರಿಷತ್ತು
## 141ನೇ ಅಧಿವೇಶನ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 273 (345) |
| ಮಾನ್ಯ ಸದಸ್ಯರ ಹೆಸರು | : | ಶ್ರೀ. ಅ. ದೇವೆಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 23-09-2020 |
| ಉತ್ತರಿಸುವ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಗಳು, (ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ) |

| ಕ್ರ.ಸಂ | ಪ್ರಶ್ನೆ | ಉತ್ತರಗಳು |
|---|---|---|
| ಅ) | ಬೆಂಗಳೂರು-ಮಾಗಡಿ ರಾಷ್ಟ್ರೀಯ ಹೆದ್ದಾರಿ-85 ರಲ್ಲಿ ಚತುಷ್ಪಥ ರಸ್ತೆ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ; | ಕೆಶಿಪ್-3 ರ ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಪ್ಯಾಕೇಜ್-1 ರಡಿಯಲ್ಲಿ ಬೆಂಗಳೂರು ನೈಸ್ ರಸ್ತೆಯಿಂದ ಮಾಗಡಿ (ರಾಜ್ಯ ಹೆದ್ದಾರಿ-85) ವರೆಗೆ 35.4 ಕಿಮೀ ಉದ್ದಕ್ಕೆ ಚತುಷ್ಪಥ ರಸ್ತೆ ಮತ್ತು ಮಾಗಡಿಯಿಂದ ಎನ್‌ಹೆಚ್-75 ವರೆಗೆ ಚಿಕ್ಕಮುದಿಗೆರೆ ಮತ್ತು ಐಯಿಂದಹಳ್ಳಿ ಮೂಲಕ ಹಾದು ಹೋಗುವ 15.34 ಕಿಮೀ ಉದ್ದಕ್ಕೆ ದ್ವಿಪಥ ರಸ್ತೆಯ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಲಾಗಿದೆ.<br><br>ಪ್ರಸ್ತುತ ಕಾಮಗಾರಿಯು ದಿನಾಂಕ: 01.07.2020 ರಂದು ಪಾರಂಭಗೊಂಡಿದ್ದು, ರಸ್ತೆಯಲ್ಲಿ ಉಪಯುಕ್ತ ವರ್ಗಾವಣೆ (utility shifting) ಮತ್ತು ಮರಗಳ ಕಟಾವಣೆಯ ಕಾರ್ಯ ಪ್ರಗತಿಯಲ್ಲಿರುತ್ತದೆ. |
| ಆ) | ಈ ರಸ್ತೆಯಲ್ಲಿ ಹಾದು ಹೋಗುವ ಚೋಳನಾಯಕನಹಳ್ಳಿ ಮತ್ತು ತಾವರೆಕೆರೆ ಗ್ರಾಮದಲ್ಲಿ ದ್ವಿಪಥ ರಸ್ತೆ ಇದ್ದು, ಈ ಗ್ರಾಮಗಳಲ್ಲಿನ ಮೇಲ್ಸೇತುವೆ ನಿರ್ಮಾಣದ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ; | ಈ ರಸ್ತೆಯಲ್ಲಿ ಹಾದು ಹೋಗುವ ತಾವರೆಕೆರೆ ಗ್ರಾಮದ ಪರಿಮಿತಿಯಲ್ಲಿ ಚತುಷ್ಪಥ ಫ್ಲೈ ಓವರ್ ನಿರ್ಮಾಣವನ್ನು ಕೆಶಿಪ್ ಯೋಜನೆಯಡಿ ಕೈಗೊಳ್ಳಲಾಗುವುದು.<br><br>ಚೋಳನಾಯಕನಹಳ್ಳಿ ಗ್ರಾಮದ ಪರಿಮಿತಿಯಲ್ಲಿ ಕೇವಲ ಚತುಷ್ಪಥ ರಸ್ತೆ ನಿರ್ಮಾಣಕ್ಕೆ ಯೋಜಿಸಲಾಗಿದ್ದು, ಈ ಭಾಗದಲ್ಲಿ ಫ್ಲೈ ಓವರ್ ನಿರ್ಮಾಣದ ಪ್ರಸ್ತಾವನೆ ಇರುವುದಿಲ್ಲ. |
| ಇ) | ಈ ಕಾಮಗಾರಿ ಪೂರ್ಣಗೊಳ್ಳಲು ಎಷ್ಟು ಸಮಯಾವಕಾಶ ಬೇಕಾಗುತ್ತದೆ? | ಗುತ್ತಿಗೆ ಕರಾರಿನಂತೆ ಕಾಮಗಾರಿ ಪೂರ್ಣಗೊಳಿಸಲು ಕಾಮಗಾರಿಯ ಪ್ರಾರಂಭ (Appointed Date) ದಿನಾಂಕದಿಂದ 24 ತಿಂಗಳುಗಳ ಅವಧಿಯನ್ನು ನಿಗದಿಪಡಿಸಲಾಗಿದೆ. |

ಸಂಖ್ಯೆ: ಲೋಇ E- 124 ಇಎಪಿ 2020

(ಗೋವಿಂದ ಎಂ. ಕಾರಜೋಳ)
ಮಾನ್ಯ ಉಪ ಮುಖ್ಯಮಂತ್ರಿಗಳು,
(ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆ)